ಬಿಡಿಸಿಕೊಡಲು... ತನ್ನ ಹೆಸರನ್ನು ಕರೆದು, ತನ್ನ ಬಾಗಿಲ ಕರ್ಟನ್ನು ಸರಿಸಿ ಒಳಗೆ ಕರೆದುಕೊಳ್ಳುವ ಕ್ಷಣವೇ ಅವನಿಗೆ ಅಪ್ಯಾಯಮಾನವಾಗಿತ್ತು. ಒಂದೇ ರೀತಿಯ ವಿಶಿಷ್ಟ ವಾಸನೆ ಹೊಡೆಯುವ ಅವಳ ಮನೆ ವಿಶೇಷಾನುಭವವನ್ನು ಹುಟ್ಟಿಸಿತ್ತು. ಕೆಲವೊಮ್ಮೆ ಟೀ–ಬ್ರೆಡ್ಡಿನ ಹೋಳು ಅವನಿಗೆಂದು ಕಾಯುತ್ತಿರುತ್ತಿದ್ದವು. ಆದರೆ ಆ ಹೊಳೆವ ಕಂಗಳ ಸಾಮಿಪ್ಯ, ಆ ಬೆವರು ಮೈಯ ಗಂಧ, ಕೆಲಸವಾದಾಗ 'ಥ್ಯಾಂಕ್ಸ್ ವೆರಿ ಮಚ್' ನೆಪದಲ್ಲಿ ಬೆನ್ನುತಟ್ಟುತ್ತಿದ್ದುದು... ಒಳಗೇನನ್ನೋ ಬಲವಾಗಿ ಬೆಳೆಸುತ್ತಿತ್ತು. ದುಡಿಮೆ, ಭವಿಷ್ಯ, ಜಾತಿ, ಜನ ಎಲ್ಲ ಮಬ್ಬಿನೊಳಗೆ ಕಳೆದುಹೋದಂತೆ ನಾಜೀಮಾಳೆಡೆಗಿನ ಏಕಮುಖ ಓತಪ್ರೋತ ಪ್ರೀತಿಪ್ರವಾಹ ನಿರಂತರವಾಗಿಬಿಟ್ಟಿತ್ತು...

## 4

'ಆನೆಬಾಗ್ಲು ನಡಿಯಪ್ಪ' ಚಾಲಕನಿಗೆ ಅಡ್ರೆಸ್ ಹೇಳಿ ಆಟೊ ಹೊಕ್ಕವನಿಗೆ ಈ ಕ್ಷಣ ತಾನು ಸ್ನಾನ ಮಾಡಿಬರಬೇಕಿತ್ತು ಎಂದು ಬಲವಾಗಿ ಅನ್ನಿಸಿತು. ಇಪ್ಪತ್ತು ವರ್ಷದ ಹಳೆಯ ನಾಜೀಮಾ, ವಯಸ್ಸಾಗದೆ ಹಾಗೆ ಪೌಡರು, ಮುಖದಲ್ಲಿ ಕಾಡಿಗೆ ಕಣ್ಣಲ್ಲಿ ಬಾಗಿಲಲ್ಲಿ ನಿಂತು, 'ರವಿ ಇಲ್ಲಿ ಬಾ' ಅಂತಾ ಕರೆದಿದ್ದಾಳೆ, ಇನ್ನೇನು ಕರ್ಟನ್ನು ಸರಿಸಿ ಅವಳ ಬೆಡ್‌ರೂಮ್ ಮೂಲಕ ಅಂತರಂಗವನ್ನು ಪ್ರವೇಶಿಸುವುದಿದೆ ಎಂದುಕೊಳ್ಳುತ್ತ ಬಂದವನಿಗೆ ಒಮ್ಮೇಲೆ ಹಿಂಜರಿಕೆ ಶುರುವಾಯಿತು. ಇಪ್ಪತ್ತುವರ್ಷದ ಚಕ್ರಕ್ಕೆ ಸಿಕ್ಕ ಊರು, ಕಾಣುತ್ತಿರುವ ಪ್ರಪಂಚ ಮಾಸಿಹೋದಂತೆನಿಸಿತು. ಅಮ್ಮನ ಜೊತೆ ನೋಡಿದ ಏಕೈಕ ಸಿನಿಮಾ 'ಅಯ್ಯಪ್ಪ ಸ್ವಾಮಿ' ತೋರಿಸಿದ ಯೂನಿಯನ್ ಟಾಕೀಸೂ ದಾಟಿತು, ಮಧ್ಯರಾತ್ರಿಯಲ್ಲಿ ನಡೆದು ಬಂದು ಬಿಸಿ ಇಡ್ಲಿ ತಿನ್ನುತ್ತಿದ್ದ ಗಾಂಧಿಸರ್ಕಲ್ಲೂ ದಾಟಿತು. ಕಬ್ಬಿಣದ ವಸ್ತುಗಳನ್ನು ರಾತ್ರಿ ಕದ್ದು ಶೇಖರಿಸಿಡುತ್ತಿದ್ದ ಆನೆಬಾಗಿಲಿನ ಗಣೇಶನ ಪೆಂಡಾಲೂ ದಾಟಿತು. ಸೈಕಲ್ ಶಾಪು, ಗಂಗಣ್ಣನ ಕಿರಾಣಿ ಅಂಗಡಿ ಎಲ್ಲವೂ ದಾಟಿತು. ಇನ್ನೇನು ಶೆಟ್ಟರ ಅಂಗಡಿ ಕಂಡರೆ ನಾನು, ಇಪ್ಪತ್ತು ವರ್ಷಗಳ ಹಳೆಯ ಪ್ರಪಂಚವನ್ನು, ಕಾಲಕ್ಕೆ ಬದಲಾಗದೆ ಹಾಗೇ ಇರುವ, ಪ್ರಪಂಚವನ್ನು ಹೊಕ್ಕುತ್ತೇನೆ... ಎಂದುಕೊಂಡ.

ಕಾಲು ಚದರ ಕಿಲೋಮೀಟರ್ ವ್ಯಾಪ್ತಿಯ ನಲವತ್ತೈವತ್ತು ಮನೆಗಳ ಅಗಸ, ರೆಡ್ಡಿ, ಮಾರ್ವಾಡಿ, ಐಯನೋರು, ಲಿಂಗಾಯ್ತ, ಕುರುಬ, ಮರಾಠಿ, ಮುಸ್ಲಿಂ ಮುಂತಾದ ವೈವಿಧ್ಯಮಯ ಜಾತಿಯ ಜನ ಇದ್ದ ಜಾಗ ತೀರಾ ಸಣ್ಣದಂತೆ ಕಂಡು ಬಂದಿತವನಿಗೆ. ಯಾರಾದರೂ ಕಂಡು ಹಿಡಿಯುತ್ತಾರೆಂದು ಮುಖವರಳಿಸಿ ನಡೆದ. ಶೇಖರಪ್ಪನೋರು ಇಲ್ವಾ, ಕಾಳಜ್ಜಿ ಇಲ್ವಾ, ರಂಗೇಶಪ್ಪ ಎಲ್ಲೋದ್ರು... ತನ್ನ ಊರಿನಲ್ಲಿ ತನ್ನ ಜಾಗದಲ್ಲಿ ತಾನೇ ಅಪರಿಚಿತನಾದದ್ದು ಪೇಚಿಗೆ ಸಿಲುಕಿಸಿತು. ಈ ಅಪರಿಚಿತನ ಎದುರುಗೊಂಡವರಿಗೆ ಪ್ರಶ್ನೆಯೆಸೆದು ಪರಿಚಿತ ಪ್ರಪಂಚದಲ್ಲಿ ಸೇರಿಕೊಂಡ ಹೊಸಬರ ದಿಟ್ಟಿಸಿದ. ಒಂದಿಬ್ಬರು ಗುರುತಿಸಿದರು. 'ಬಾರಪ್ಪಾ' ಅಂತಾ ಕರೆದರು. ಹುರುಪಿನಿಂದ ಏನೊ ಪ್ರಶ್ನಿಸಿ ಸುಂದರವಾದ ಹಳೆಯ ಪ್ರಪಂಚವನ್ನು ಬಾಚಿಕೊಳ್ಳುವೆ ಎಂದುಕೊಂಡಿದ್ದವನಿಗೆ–

'ನಿಮ್ಮಮ್ಮ ಯಾವಾಗ ಸಾಯ್ತು? ಆಮೇಲೆ... ಪೊಲೀಸರು ಅವ್ರನ್ನ ಅಲ್ಲೂ ಬಿಡ್ಲಿಲ್ವಾ?'

'ನಿನ್ಹೆಂಡ್ತಿಗೆ ಬಸ್ರು ಇಳ್ಕೋಕೆ ಹೋಗಿತ್ತೇನೋ?'

'ನಿಮ್ಮಪ್ಪ ಅಲ್ಲಿ ಬಂದು ಸೇರ್ಕಂಡಿದಾನಾ? ಸಾಲ ಕೊಟ್ಟೋರು ಈಗ್ಲೂ ಬರ್ತಿರ್ತಾರೆ.'

ಮಾತಿನ ಈಟಿಗಳ ಇರಿತ ಇಪ್ಪತ್ತು ವರ್ಷದ ಹಿಂದಿನಷ್ಟೆ ಹರಿತವಾಗಿದ್ದವು. ನನ್ನ ಬಾಲ್ಯ ಅನಿಷ್ಟದ್ದಾಗಿತ್ತು ಎಂಬುದು ಮರೆತಿದ್ದೆನಲ್ಲ ಅಂದುಕೊಂಡ. ಬಂದು ತಪ್ಪು ಮಾಡಿದೆನಾ ಎಂದು ಬೆವರೊರೆಸಿಕೊಂಡ. ಯಾವ ಯಾವುದೋ ಸಂಧಿಮನೆಗಳಲ್ಲಿ ಮಲಗೆದ್ದು ಬಂದ ಮುಖಗಳು ಗರತಿಯ ಸೋಗಿನಲ್ಲಿ ತನ್ನ ಪ್ರಶ್ನಿಸಿದ್ದು ಕಂಡು ಒಳಗೇ ಎದ್ದ ಕ್ರೋಧವನ್ನು ತಣಿಸಿಕೊಂಡ.